**ದಿಃ14.09.2022 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

1. 2 ನೇ ಪ್ರತಿವಾದಿಯವರು ಬೊಂಬೆಯಲ್ಲಿ ವಾಸಿಸುತ್ತಿದ್ದಾರೆ. ಸದರಿಯವರು ಸಿವಿಲ್ ಇಂಜಿನಿಯರ್ ಆಗಿರುತ್ತಾರೆ. 2 ನೇ ಪ್ರತಿವಾದಿ ಮದುವೆಯಾಗಿರುವುದಿಲ್ಲ ಎಂದರೆ ಸರಿ. 2 ನೇ ಪ್ರತಿವಾದಿಯವರು ವರ್ಷಕ್ಕೆ ಒಮ್ಮೆ ಊರಿಗೆ ಬಂದು ಹೋಗುತ್ತಾರೆ. ಸದರಿಯವರು ಊರಿಗೆ ಬಂದರೆ ಒಂದು ದಿನ ಊರಿನಲ್ಲಿ ಇರುತ್ತಾರೆ. 2 ನೇ ಪ್ರತಿವಾದಿಂ ಊರಿಗೆ ಬಂದರೆ ಮನೆಯಲ್ಲಿ ತಂಗುವುದಿಲ್ಲ. 1986 ರಲ್ಲಿ 2 ನೇ ಪ್ರತಿವಾದಿ ಬೊಂಬೆಗೆ ಹೋಗಿರುತ್ತಾರೆ. 2 ನೇ ಪ್ರತಿವಾದಿಯವರು ದಾವಾ ಷೆಡ್ಯೂಲ್ ಆಸ್ತಿಯ ಕೃಷಿಯಲ್ಲಿ ತೊಡಗಿಕೊಂಡಿರುವುದಿಲ್ಲ ಎಂದರೆ ಸರಿ.

2. ನಾನು ಸೇನೆಯಲ್ಲಿ ಕೆಲಸ ಮಾಡುತ್ತಿದ್ದು, 2005 ರಲ್ಲಿ ಸೇನೆಯಿಂದ ನಿವೃತ್ತಿ ಹೊಂದಿರುತ್ತೇನೆ. ನಾನು 21 ವರ್ಷ ಸೇನೆಯಲ್ಲಿ ಸೇವೆ ಸಲ್ಲಿಸಿರುತ್ತೇನೆ. ವಾದಿಯವರ

ತಂದೆ ಬಿ ಎಸ್ ಎಫ್ ನಲ್ಲಿ ಕೆಲಸ ಮಾಡುತ್ತಿದ್ದರು. ವಾದಿಯವರ ತಂದೆ ಸೇವೆಯಲ್ಲಿ ಇರುವಾಗಲೆ ಹಿಮಪಾತವಾಗಿ ಮೃತಪಟ್ಟಿರುತ್ತಾರೆ. ವಾದಿಯವರ ತಂದೆ ಬಿ ಎಸ್ ಎಫ್ ನಲ್ಲಿ ಸೇವೆ ಸಲ್ಲಿಸಿರುತ್ತಿರುವಾಗ ಆತನ ಹೆಂಡತಿಯಾದ ಯಶೋಧ ದಾವಾ ಷೆಡ್ಯೂಲ್ ಐಟಮ್ ನಂ:5 ರಲ್ಲಿ ಇರುವಂತಹ ಮನೆಯಲ್ಲಿ ನಮ್ಮ ತಂದೆ ತಾಯಿಯ ಜೊತೆ ವಾಸಿಸುತ್ತಿದ್ದರು ಎಂದರೆ ಸರಿ. ಸದರಿ ಯಶೋಧ ನಮ್ಮ ತಂದೆ ತಾಯಿಯ ಜೊತೆ ವಾಸ ಮಾಡಿಕೊಂಡು ದಾವಾ ಷೆಡ್ಯೂಲ್ ಐಟಮ್ ನಂ:1 ರಿಂದ 6 ಆಸ್ತಿಗಳ ಕೃಷಿ ಮಾಡುತ್ತಿದ್ದರು ಎಂದರೆ ಸರಿ. ವಾದಿಯವರ ತಂದೆಯಾದ ಪಳಂಗಪ್ಪರವರು ರಜೆಯಲ್ಲಿ ಊರಿಗೆ ಬಂದಾಗ ಕೂಡ ಕೃಷಿ ಕೆಲಸ ಮಾಡುತ್ತಿದ್ದರು ಎಂದರೆ ಸುಳ್ಳು. ವಾದಿಯವರ ತಂದೆಯಾದ ಪಳಂಗಪ್ಪರವರು ಕೃಷಿ ಕೆಲಸಕ್ಕಾಗಿ ಹಣದ ಸಹಾಯ ಮಾಡುತ್ತಿದ್ದರು ಎಂದರೆ ಸುಳ್ಳು.

3. ದಾವಾ ಷೆಡ್ಯೂಲ್ ಐಟಮ್ ನಂ: 1 ಆಸ್ತಿ ನನ್ನ ಅಜ್ಜನಾದ ಬೆಳ್ಳಿಯಪ್ಪರವರಿಗೆ ಮಂಜೂರು ಆಗಿರುತ್ತದೆ, ನಂತರದಲ್ಲಿ ನಮ್ಮ ತಂದೆ ಅದನ್ನು ಖರೀದಿಸಿರುತ್ತಾರೆ. ದಾವಾ ಷೆಡ್ಯೂಲ್ ಐಟಮ್ ನಂ:1 ನ್ನು ನನ್ನ ತಂದೆಯವರು ನನ್ನ ಅಜ್ಜನಾದ ಬೆಳ್ಳಿಯಪ್ಪರವರಿಂದ ಕ್ರಯಕ್ಕೆ ಪಡೆದುಕೊಂಡ ಬಗ್ಗೆ ತೋರಿಸಲು ನೊಂದಾಯಿತ ಕ್ರಯ ಪತ್ರ ಇರುವುದಿಲ್ಲ. ಅದೇ ರೀತಿ ಬೆಳ್ಳಿಯಪ್ಪರವರ ಹೆಸರಿನಿಂದ ನನ್ನ ತಂದೆಯ ಹೆಸರಿಗೆ ಖಾತೆ ಬದಲಾವಣೆ ಆದ ಬಗ್ಗೆ ತೋರಿಸಲು ಮ್ಯೂಟೇಷನ್ ನಡೆವಳಿ ಇರುವುದಿಲ್ಲ. ದಾವಾ ಷೆಡ್ಯೂಲ್ ಐಟಮ್ ನಂ: 1 ವಾದಿಯವರ ಮುತ್ತಜ್ಜನ ಆಸ್ತಿಯಾಗಿರುತ್ತದೆ ಎಂದರೆ ಸುಳ್ಳು. ದಾವಾ ಷೆಡ್ಯೂಲ್ ಐಟಮ್ ನಂ: 1 ನ್ನು ನನ್ನ ತಂದೆಯವರು ಬೆಳ್ಳಿಯಪ್ಪರವರಿಂದ ಖರೀದಿಸಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4. ನಿಡಿ 1ರ ಪ್ರಕಾರ ಬಾರಿಕೆ ಬೆಳ್ಳಿಯಪ್ಪರವರು ಪಟ್ಟೆದಾರರು ಎಂದರೆ ಸುಳ್ಳು. ದಾವಾ ಷೆಡ್ಯೂಲ್ ಐಟಮ್ ನಂ: 1 ಕುಟುಂಬದ ಹಿತಕ್ಕಾಗಿ ಕುಟುಂಬದ ಯಜಮಾನನಾದ ಬಾರಿಕೆ ಬೆಳ್ಳಿಯಪ್ಪರವರಿಗೆ ಮಂಜೂರಾಗಿರುತ್ತದೆ ಎಂದರೆ ಸುಳ್ಳು. ನನ್ನ ತಂದೆಯಾದ ಅಯ್ಯಣ್ಣ ಎಂಬುವವರು ಯಾವುದೆ ಕೆಲಸದಲ್ಲಿ ಇರಲಿಲ್ಲ. ನನ್ನ ತಂದೆಗೆ ಕೃಷಿ ಆದಾಯ ಮಾತ್ರ ಇತ್ತು ಎಂದರೆ ಸರಿ.

5. ದಾವಾ ಷೆಡ್ಯೂಲ್ ಐಟಮ್ ನಂ: 2 ನನ್ನ ತಂದೆಯಾದ ಅಯ್ಯಣ್ಣರವರು ಖರೀದಿಸಿದಂತಹ ಆಸ್ತಿಯಾಗಿರುತ್ತದೆ. ದಾವಾ ಷೆಡ್ಯೂಲ್ ಐಟಮ್ ನಂ: 1 ರಲ್ಲಿ ಏಲಕ್ಕಿ ಬೆಳೆ ಇತ್ತು. ಸದರಿ ಏಲಕ್ಕಿ ಕೃಷಿಯಿಂದ ಬಂದಂತಹ ಆದಾಯದಿಂದಲೆ ದಾವಾ ಷೆಡ್ಯೂಲ್ ಐಟಮ್ ನಂ: 2 ನ್ನು ಖರೀದಿಸಿರುವುದು ಎಂದರೆ ಸುಳ್ಳು. ದಾವಾ ಷೆಡ್ಯೂಲ್ ಐಟಮ್ ನಂ: 2 ನ್ನು ವಾರ ಮಾಡಿ ಬಂದಂತಹ ಆದಾಯದಿಂದ ಖರೀದಿಸಿರುವಂತಹ ಆಸ್ತಿಯಾಗಿರುತ್ತದೆ. ಮುಕ್ಕಾಟಿ ದೇವಯ್ಯ ಎಂಬುವವರಿಗೆ ಸೇರಿದ ಜಮೀನಿನಲ್ಲಿ ವಾರ ಮಾಡಿರುತ್ತೇವೆ. ಸಾಮಾನ್ಯವಾಗಿ ವಾರ ಮಾಡಬೇಕಾದರೆ ಒಪ್ಪಂದದ ಚೀಟಿ ಮಾಡಿಕೊಳ್ಳುತ್ತಾರೆ ಎಂದರೆ ಸಾಕ್ಷಿ ನಾವು ಬಾಯಿ ಮಾತಿನ ಮುಖಾಂತರ ವಾರ ಮಾಡಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ದಾವಾ ಷೆಡ್ಯೂಲ್ ಐಟಮ್ ನಂ: 1 ರಲ್ಲಿ ಬಂದಂತಹ ಕೃಷಿ ಉತ್ಪನ್ನದಿಂದಲೆ ದಾವಾ ಷೆಡ್ಯೂಲ್ ಐಟಮ್ ನಂ: 2 ನ್ನು ಖರೀದಿಸಿರುವುದು ಎಂದರೆ ಸುಳ್ಳು. ದಾವಾ ಷೆಡ್ಯೂಲ್ ಐಟಮ್ ನಂ: 2 ನ್ನು ಒಟ್ಟು ಕುಟುಂಬದ ಹಿತಕ್ಕಾಗಿ ಖರೀದಿಸಿರುವ ಆಸ್ತಿಯಾಗಿರುತ್ತದೆ ಎಂದರೆ ಸುಳ್ಳು.

6. ನಿಪಿ 4 ಆರ್ ಟಿ ಸಿ ಯ ಕಲಂ 9 ರಲ್ಲಿ ನನ್ನ ಹೆಸರು, ನನ್ನ ತಂದೆಯ ಹೆಸರು, ವಾದಿಯವರ ತಂದೆಯಾದ ಪಳಂಗಪ್ಪರವರ ಹೆಸರು ಇದೆ ಎಂದರೆ ಸರಿ. ನಿಪಿ 4 ಆರ್ ಟಿ ಸಿ ಯಲ್ಲಿ ನನ್ನ ಮತ್ತು ವಾದಿಯವರ ತಂದೆಯ ಹೆಸರನ್ನು ನಮ್ಮ ತಂದೆ ಸೇರಿಸಿರುತ್ತಾರೆ. ಯಾವ ವರ್ಷದಲ್ಲಿ ನಮ್ಮ ಹೆಸರನ್ನು ನಮ್ಮ ತಂದೆಯವರು ಸೇರಿಸಿರುತ್ತಾರೆ ಎಂದು ಹೇಳಲು ನನಗೆ ಗೊತ್ತಿಲ್ಲ. ದಾವಾ ಷೆಡ್ಯೂಲ್ ಐಟಮ್ ನಂ: 2 ಒಟ್ಟು ಕುಟುಂಬದ ಆಸ್ತಿ ಆದ್ದುದ್ದರಿಂದಲೆ ನಮ್ಮ ತಂದೆಯವರು ನನ್ನ ಹಾಗೂ ಪಳಂಗಪ್ಪರವರ ಹೆಸರನ್ನು ಸೇರಿಸಿರುತ್ತಾರೆ ಎಂದರೆ ಸರಿ.

7. ದಾವಾ ಷೆಡ್ಯೂಲ್ ಐಟಮ್ ನಂ: 3 ನ್ನು ಕೂಡ ನಮ್ಮ ತಂದೆಯವರು ಖರೀದಿಸಿರುತ್ತಾರೆ. ಯಾವ ವರ್ಷದಲ್ಲಿ ನಮ್ಮ ತಂದೆಯವರು ದಾವಾ ಷೆಡ್ಯೂಲ್ ಐಟಮ್ ನಂ: 3 ನ್ನು ಖರೀದಿಸಿರುತ್ತಾರೆ ಎಂದು ಹೇಳಲು ನನಗೆ ಸರಿಯಾಗಿ ಗೊತ್ತಿಲ್ಲ. ಬೋಜಪ್ಪ ಎಂದರೆ ನನ್ನ ದೊಡ್ಡಪ್ಪ. 9ನೇ ಪ್ರತಿವಾದಿ ನನ್ನ ಚಿಕ್ಕಪ್ಪ. ಸದರಿ ಬೋಜಪ್ಪ ಮತ್ತು 9ನೇ ಪ್ರತಿವಾದಿಯವರು ದಾವಾ ಷೆಡ್ಯೂಲ್ ಐಟಮ್ ನಂ: 3 ನ್ನು ಖರೀದಿಸಲು

ಸೇರಿರುವುದಿಲ್ಲ. ನನ್ನ ತಿಳುವಳಿಕೆ ಪ್ರಕಾರ ದಾವಾ ಷೆಡ್ಯೂಲ್ ಐಟಮ್ ನಂ: 3 ನ್ನು ನನ್ನ ತಂದೆಯವರು ಮಾತ್ರ ಕೃಷಿ ಮಾಡಿಕೊಂಡು ಬಂದಿರುತ್ತಾರೆ. ಬೋಜಪ್ಪ ಮತ್ತು 9 ನೇ ಪ್ರತಿವಾದಿಯವರು ದಾವಾ ಷೆಡ್ಯೂಲ್ ಐಟಮ್ ನಂ: 3 ರ ಕೃಷಿ ಮಾಡಿರುವುದಿಲ್ಲ. ದಾವಾ ಷೆಡ್ಯೂಲ್ ಐಟಮ್ ನಂ: 3 ನ್ನು ಕೃಷಿ ಆದಾಯದಿಂದಲೆ ನಮ್ಮ ತಂದೆ ಖರೀದಿಸಿರುತ್ತಾರೆ ಎಂದರೆ ಸರಿ. ದಾವಾ ಷೆಡ್ಯೂಲ್ ಐಟಮ್ ನಂ: 3 ನ್ನು ನಮ್ಮ ತಂದೆಯವರು ಕುಟುಂಬದ ಯಜಮಾನರಾಗಿ ಮತ್ತು ಕುಟುಂಬದ ಹಿತಕ್ಕಾಗಿ ಖರೀದಿಸಿರುವ ಆಸ್ತಿಯಾಗಿರುತ್ತದೆ ಎಂದರೆ ಸುಳ್ಳು.

8. ದಾವಾ ಷೆಡ್ಯೂಲ್ ಐಟಮ್ ನಂ: 4 ನನ್ನ ತಂದೆಯವರಿಗೆ 1953 ರಲ್ಲಿ ಪೈಸಾರಿ ಮಂಜೂರಾಗಿ ಬಂದಿರುವ ಆಸ್ತಿಯಾಗಿರುತ್ತದೆ. ನಿಡಿ 2 ರ ಪ್ರಕಾರ ನಮ್ಮ ತಂದೆಯಾದ ಬಾರಿಕೆ ಅಯ್ಯಣ್ಣರವರನ್ನು ಕುಟುಂಬದ ಪಟ್ಟೆದಾರರಾಗಿ ತೋರಿಸಿದ್ದಾರೆ ಎಂದರೆ ಸರಿ, ನಂತರದಲ್ಲಿ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನನ್ನ ತಂದೆಯವರು ಕುಟುಂಬದ ಯಜಮಾನರಾಗಿದ್ದ ಕಾರಣದಿಂದ ಕುಟುಂಬದ ಹಿತಕ್ಕಾಗಿ ದಾವಾ ಷೆಡ್ಯೂಲ್ ಐಟಮ್ ನಂ: 4 ನ್ನು ಸರ್ಕಾರದವರು ಪೈಸಾರಿ ಮಂಜೂರು ಮಾಡಿರುತ್ತಾರೆ ಎಂದರೆ ಸುಳ್ಳು.

9. ದಾವಾ ಷೆಡ್ಯೂಲ್ ಐಟಮ್ ನಂ: 5 ರಲ್ಲಿ ವಾಸದ ಮನೆ ಇರುವುದು ಎಂದರೆ ಸರಿ. ದಾವಾ ಷೆಡ್ಯೂಲ್ ಐಟಮ್ ನಂ: 5 ರಲ್ಲಿಯೇ ಸೌದೆ ಕೊಟ್ಟಿಗೆ ಮತ್ತು ಕೃಷಿ ಸಂಬಂಧಪಟ್ಟ ಇತರೆ ವಸ್ತುಗಳನ್ನು ಇಡುವ ದಾಸ್ತಾನು ಇದೆ ಎಂದರೆ ಸರಿ. ಸಾಕ್ಷಿಗೆ ಒಂದು ಮನೆಯಿರುವ ಛಾಯ ಚಿತ್ರವನ್ನು ತೋರಿಸಿದ್ದು, ಸದರಿ ಮನೆ ದಾವಾ ಷೆಡ್ಯೂಲ್ ಐಟಮ್ ನಂ: 5 ರಲ್ಲಿ ಇರುವಂತಹ ಮನೆ ಎಂದು ನೋಡಿ ಒಪ್ಪಿದ ಮೇರೆಗೆ ನಿಪಿ 9 ಎಂದು ಗುರುತಿಸಲಾಯಿತು. ದಾವಾ ಷೆಡ್ಯೂಲ್ ಐಟಮ್ ನಂ: 5 ರ ಮನೆ ದಳ ಪೈಸಾರಿ ಜಾಗವಾಗಿರುತ್ತದೆ. ಸದರಿ ಮನೆದಳ 1958 ರಲ್ಲಿ ಮಂಜೂರು ಆಗಿರುತ್ತದೆ. ಮನೆದಳ ಸರ್ಕಾರದಿಂದ ಮಂಜೂರಾಗಿರುತ್ತದೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ನಿಪಿ 9 ರಲ್ಲಿರುವ ಮನೆ 1958 ರಿಂದಲೂ ಇದೆ. ಸದರಿ ಮನೆಯಲ್ಲಿಯೆ ನಮ್ಮ ತಂದೆಯವರು, ನಾವು ಮತ್ತು ಎಲ್ಲಾ ಮಕ್ಕಳು

ವಾಸಿಸುತ್ತಿದ್ದೆವು ಎಂದರೆ ಸರಿ. ನಿಪಿ 9 ರಲ್ಲಿ ಕಾಣುವ ಮನೆ ಎಲ್ಲರಿಗೂ ಹಕ್ಕು ಇರುವಂತಹ ಮನೆ ಎಂದರೆ ಸರಿ. ಅಲ್ಲಿ ಇರುವ ಮನೆದಳದ ಪೂರ್ತಿ ಎಲ್ಲಾ ಮಕ್ಕಳು ಉಪಯೋಗಿಸಿಕೊಂಡು ಬರುವ ಹಕ್ಕು ಇದೆ ಎಂದರೆ ಸರಿ. ಮನೆದಳವನ್ನು ಸರ್ಕಾರದವರು ಕುಟುಂಬಕ್ಕೆ ಮನೆ ಕಟ್ಟುವ ಉದ್ದೇಶದಿಂದ ಮಂಜೂರು ಆಗಿರುವಂತಹ ದಳ ಎಂದರೆ ಸರಿ.

10. ದಾವಾ ಷೆಡ್ಯೂಲ್ ಐಟಮ್ ನಂಃ 6 ನ್ನು ನನ್ನ ತಂದೆಯವರು ಮಾತ್ರ ಖರೀದಿಸಿರುತ್ತಾರೆ. ದಾವಾ ಷೆಡ್ಯೂಲ್ ಐಟಮ್ ನಂಃ 6 ನ್ನು ನನ್ನ ತಂದೆಯವರು ಖರೀದಿಸಿದ ನಂತರದಲ್ಲಿ ಬೋಜಪ್ಪ ಮತ್ತು 9 ನೇ ಪ್ರತಿವಾದಿಯವರು ಸೇರಿರುತ್ತಾರೆ. ಬೋಜಪ್ಪರವರು ಮತ್ತು 9 ನೇ ಪ್ರತಿವಾದಿಯವರಿಗೆ ದಾವಾ ಷೆಡ್ಯೂಲ್ ಐಟಮ್ ನಂಃ 6 ರಲ್ಲಿ ಹಕ್ಕು ಇದೆ. ಎಷ್ಟು ವಿಸ್ತೀರ್ಣದ ಆಸ್ತಿಗೆ ಹಕ್ಕು ಇದೆ ಎಂದರೆ ಸಾಕ್ಷಿ 3 ಭಾಗ ಆಗಬೇಕು ಎಂದು ನುಡಿಯುತ್ತಾರೆ. ದಾವಾ ಷೆಡ್ಯೂಲ್ ಐಟಮ್ ನಂಃ 6 ವಿಭಾಗ ಆಗಿ, ನನ್ನ ತಂದೆಯ ಹಿಸ್ಸೆಗೆ ಬಂದಿರುತ್ತದೆ. ಸದರಿ ವಿಭಾಗದ ಪ್ರಕಾರ ನನ್ನ ತಂದೆಗೆ ದಾವಾ ಷೆಡ್ಯೂಲ್ ಐಟಮ್ ನಂಃ 6 ರಲ್ಲಿ 1.82 ಎಕರೆ ಆಸ್ತಿ ಬಂದಿರುತ್ತದೆ. ಸದರಿ 1.82 ಎಕರೆ ಆಸ್ತಿಯ ಪೂರ್ವಕ್ಕೆ ಆಚೀರ ಕುಟುಂಬದ ಮನೆ ಇದೆ, ಪಶ್ಚಿಮಕ್ಕೆ ಹೊಳೆ ಇದೆ, ಉತ್ತರಕ್ಕೆ ನಮಗೆ ಸೇರಿದ ತೋಟ, ದಕ್ಷಿಣಕ್ಕೆ ತೊತ್ತಿಯನ ಕುಟುಂಬದ ಮನೆ ಇದೆ. ದಾವಾ ಷೆಡ್ಯೂಲ್ ಐಟಮ್ ನಂಃ 6 ನ್ನು ನನ್ನ ತಂದೆ, ನನ್ನ ದೊಡ್ಡಪ್ಪ ಹಾಗೂ 9 ನೇ ಪ್ರತಿವಾದಿಯವರು ಕೃಷಿ ಆದಾಯದಿಂದಲೆ ಖರೀದಿಸಿರುವಂತಹ ಆಸ್ತಿ ಎಂದರೆ ಸರಿ.

11. ನನ್ನ ತಂದೆಯವರು ಕುಟುಂಬಕ್ಕಾಗಿಯೆ ಈ ಎಲ್ಲಾ ಆಸ್ತಿಗಳನ್ನು ಖರೀದಿಸಿರುತ್ತಾರೆ ಎಂದರೆ ಸುಳ್ಳು. ದಾವಾ ಷೆಡ್ಯೂಲ್ ಐಟಮ್ ನಂಃ 1 ರಿಂದ 6 ಆಸ್ತಿಗಳಲ್ಲಿ ಪಳಂಗಪ್ಪರವರಿಗೂ ಕೂಡ ಪಾಲು ಇತ್ತು ಎಂದರೆ ಸುಳ್ಳು. ದಾವಾ ಷೆಡ್ಯೂಲ್ ಐಟಮ್ ನಂಃ 1 ರಿಂದ 6 ಆಸ್ತಿಗಳಲ್ಲಿ ಪಳಂಗಪ್ಪರವರ ಹಿಸ್ಸೆಗೆ ಬರುವಂತಹ ಆಸ್ತಿ ಈಗ ವಾದಿಯವರ ಪಾಲಿಗೆ ಹೋಗಬೇಕು ಎಂದರೆ ಸುಳ್ಳು. ಪಳಂಗಪ್ಪರವರು ಮೃತಪಡುವ ಸಮಯದಲ್ಲಿ 1 ನೇ ವಾದಿಗೆ 4 ವರ್ಷ ಮತ್ತು 2 ನೇ ವಾದಿಗೆ 3 ವರ್ಷ ವಯಸ್ಸು ಆಗಿತ್ತು. ಪಳಂಗಪ್ಪರವರು ಮೃತಪಟ್ಟ ನಂತರದಲ್ಲಿ ವಾದಿಯವರಿಗೆ ಮತ್ತು

ವಾದಿಯವರ ತಾಯಿಗೆ ಮತ್ತು ವಾದಿಗಳಿಗೆ ತೊಂದರೆ ಕೊಡಲು ಪ್ರಾರಂಭಿಸಿರುತ್ತೇವೆ ಎಂದರೆ ಸುಳ್ಳು. ನಂತರದಲ್ಲಿ ನಮ್ಮ ತೊಂದರೆಯಿಂದ ತಪ್ಪಿಸಿಕೊಳ್ಳುವ ಸಲುವಾಗಿ ಯಶೋಧ ತನ್ನ ಚಿಕ್ಕ ಮಕ್ಕಳನ್ನು ಕರೆದುಕೊಂಡು ತನ್ನ ತಾಯಿಯ ಮನೆಗೆ ಹೋಗಬೇಕಾಗುವಂತಹ ಸಂದರ್ಭ ಬಂತು ಎಂದರೆ ಸುಳ್ಳು. ವಾದಿಯವರಿಗೆ ಅವರ ತಂದೆಯ ಹಿಸ್ಸೆಯನ್ನು ಕೊಡಬೇಕಾಗಿರುವ ಹೊಣೆಯಿಂದ ತಪ್ಪಿಸಿಕೊಳ್ಳುವ ಸಲುವಾಗಿ ದಾವಾ ಷೆಡ್ಯೂಲ್ ಐಟಮ್ ನಂ: 1 ರಿಂದ 6 ಆಸ್ತಿಗಳು ನನ್ನ ತಂದೆಯ ಸ್ವಯಾರ್ಜಿತ ಆಸ್ತಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಐಟಮ್ ನಂ: 1 ರಿಂದ 6 ಆಸ್ತಿಗಳು ವಾದಿಯವರ ತಂದೆ ಮತ್ತು ಅವರ ನಂತರದಲ್ಲಿ ವಾದಿಯವರಿಗೆ ಸೇರಿ ಎಲ್ಲ ಕುಟುಂಬದ ಆಸ್ತಿ ಎಂದರೆ ಸರಿ.

12. ನಿಪಿ 9 ರಲ್ಲಿ ಕಾಣುವ ಮನೆಯ ಒಂದು ಕೋಣೆಯಲ್ಲಿ ವಾದಿಯವರ ತಾಯಿಯಾದ ಯಶೋಧ, ತಮಗೆ ಸಂಬಂಧಿಸಿದ ಎಲ್ಲಾ ಪಾತ್ರೆ ಮತ್ತು ಇತರೆ ವಸ್ತುಗಳನ್ನು ಇಟ್ಟು ಬೀಗ ಹಾಕಿದ್ದರು ಎಂದರೆ ಸರಿ. ನಿಪಿ 9 ರಲ್ಲಿ ಕಾಣುವ ಮೂಲ ಮನೆಯ ಬಲ ಭಾಗದಲ್ಲಿ ಇರುವ ಹಂಚಿನ ಮನೆಯಲ್ಲಿ ನಾನು ವಾಸಿಸುತ್ತಿದ್ದೇನೆ. ಸದರಿ ಮನೆ ಲೈನ್ ಮನೆ ಆಗಿರುತ್ತದೆ. ನಿಪಿ 9 ರಲ್ಲಿ ಕಾಣುವ ಮೂಲ ಮನೆಯನ್ನು ಬಿದ್ದು ಹೋಗಿದ್ದು, ನಾವು ಈಗ ಹೊಸ ಮನೆಯನ್ನು ಕಟ್ಟುತ್ತಿದ್ದೇವೆ, ಇನ್ನು ಕಟ್ಟಡ ಪೂರ್ಣಗೊಂಡಿರುವುದಿಲ್ಲ. ದಾವಾ ಷೆಡ್ಯೂಲ್ ಐಟಮ್ ನಂ: 5 ರಲ್ಲಿ ಈಗ ವಾದಿಯವರು ಮತ್ತು ಅವರ ತಾಯಿ ಬಂದರೆ ಇರಲು ಮನೆ ಇಲ್ಲ ಎಂದರೆ ಸರಿ, ಮನೆ ಬಿದ್ದು ಹೋಗಿದೆ ಎಂದು ನುಡಿಯುತ್ತಾರೆ. ದಾವಾ ಷೆಡ್ಯೂಲ್ ಐಟಮ್ ನಂ: 5 ರಲ್ಲಿ ಇದ್ದಂತಹ ಮೂಲ ಮನೆ ಸ್ವಾಭಾವಿಕವಾಗಿ ಬಿದ್ದು ಹೋದಂತಹ ಮನೆ ಆಗಿರುವುದಿಲ್ಲ, ನಾನೇ ಸ್ವತಃ ಹೊಸ ಮನೆಯನ್ನು ಕಟ್ಟುವ ಸಲುವಾಗಿ ಕೆಡವಿರುತ್ತೇವೆ ಎಂದರೆ ಸುಳ್ಳು.

13. ನಿಡಿ 10 ರಲ್ಲಿ ತೋರಿಸಿರುವಂತಹ ದಾವಾ ಷೆಡ್ಯೂಲ್ ಎ ಮತ್ತು ಬಿ ಆಸ್ತಿಗಳಿಗೆ ಸಂಬಂಧಿಸಿದಂತೆ ನನ್ನ ಪ್ರಕಾರ ಪ್ರತಿವಾದಿ 4 ರಿಂದ 13 ರವರಿಗೆ ಹಕ್ಕು ಇರುವುದಿಲ್ಲ. 2015 ರಲ್ಲಿ ದಾವಾ ಷೆಡ್ಯೂಲ್ ನ ಕೆಲವು ಐಟಮ್ ಗಳಲ್ಲಿ ಇದ್ದಂತಹ ಪಳಂಜಿ ಮರಗಳನ್ನು ಕಟ್ಟಾವು ಮಾಡಿರುತ್ತೇನೆ ಎಂದರೆ ಸರಿ. ಆ ಸಮಯದಲ್ಲಿ

ದಾವೆಯನ್ನು ದಾಖಲಿಸಿದ್ದು, ಮರಗಳ ಸೀಮಿತವಾಗಿ ರಾಜಿ ಮಾಡಿಕೊಂಡು ವಾದಿಗಳ ಹೆಸರಿನಲ್ಲಿ 2 ಲಕ್ಷ ರೂ.ಗಳನ್ನು ಠೇವಣಿ ಇಟ್ಟಿರುವ ಬಗ್ಗೆ ನನ್ನ ಗಮನದಲ್ಲಿ ಇದೆ. ನ್ಯಾಯಾಲಯದಲ್ಲಿ ಸದರಿ ದಾವೆಯಲ್ಲಿ ರಾಜಿ ಮಾಡಿಕೊಳ್ಳುವಾಗ ನನ್ನ ತಂದೆಯವರಿಗೆ 80 ವರ್ಷ ವಯಸ್ಸು ಆಗಿತ್ತು. ನನ್ನ ತಂದೆಯವರಿಗೆ ನ್ಯಾಯಾಲಯಕ್ಕೆ ಬರಲು ಸರಿಯಾಗಿ ನಡೆಯಲು ಆಗುತ್ತಿರಲಿಲ್ಲ, ಆದ್ದರಿಂದ ನನ್ನ ಹೆಂಡತಿ ನನ್ನ ತಂದೆಯ ಕೈಯನ್ನು ಹಿಡಿದು ಕರೆದುಕೊಂಡು ಬಂದಿದ್ದರು ಎಂದರೆ ಸುಳ್ಳು. ನನ್ನ ತಂದೆಯವರಿಗೆ ಕಿವಿ ಸರಿಯಾಗಿ ಕೇಳಿಸುತ್ತಿರಲಿಲ್ಲ ಎಂದರೆ ಸುಳ್ಳು. ನನ್ನ ತಂದೆಯವರ ಆರೋಗ್ಯ ಚೆನ್ನಾಗಿಯೆ ಇತ್ತು.

14. ನಿಡಿ 10ರ ಷೆಡ್ಯೂಲ್ ಎ ನಲ್ಲಿ ತಿಳಿಸಿರುವ ಐಟಮ್ ನಂ: 3 ಆದಂತಹ ಸರ್ವೆ ನಂ: 149/3 ರಲ್ಲಿ ಇರುವ 1.44 ಎಕರೆ ಆಸ್ತಿ ಹೇಗೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ, ಸಾಕ್ಷಿಯು ನಿಡಿ 10 ದಾಖಲೆಯನ್ನು ನೋಡಿ, ಸದರಿ ಆಸ್ತಿ ಎಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಆಸ್ತಿಗೆ ಸಂಬಂಧಿಸಿದ ಯಾವುದೆ ದಾಖಲೆಯನ್ನು ನಾನು ನೋಡಿರುವುದಿಲ್ಲ. ಅದೇ ರೀತಿ ನಿಡಿ 10ರ ಷೆಡ್ಯೂಲ್ ಎ ನಲ್ಲಿ ತಿಳಿಸಿರುವ ಐಟಮ್ ನಂ: 5 ಆದಂತಹ ಸರ್ವೆ ನಂ: 162 ರಲ್ಲಿ ಇರುವ 22 ಸೆಂಟ್ಸ್ ಆಸ್ತಿ ಹೇಗೆ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ಆಸ್ತಿಗೆ ಸಂಬಂಧಿಸಿದ ಯಾವುದೆ ದಾಖಲೆಯನ್ನು ನಾನು ನೋಡಿರುವುದಿಲ್ಲ. ಸಾಕ್ಷಿಯು ನಿಡಿ 10 ದಾಖಲೆಯನ್ನು ನೋಡಿ, ಸದರಿ ಆಸ್ತಿ ಎಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಡಿ 10 ರಲ್ಲಿ ಸಾಕ್ಷಿದಾರರಾಗಿ ತೋರಿಸಿರುವ ಸಿ ಡಿ ಈರಪ್ಪ ಎಂದರೆ ನನ್ನ ತಂಗಿಯಾದ 7ನೇ ಪ್ರತಿವಾದಿಯ ಗಂಡ. ಅದೇ ರೀತಿ ನಿಡಿ 10 ರಲ್ಲಿ ಸಾಕ್ಷಿದಾರರಾಗಿ ತೋರಿಸಿರುವ ಬಿ ಎಸ್ ಸತೀಶ್ ನನ್ನ ಹೆಂಡತಿಯ ತಮ್ಮ ಎಂದರೆ ಸರಿ. ನಿಡಿ 10 ದಾಖಲೆಯನ್ನು ಮಾಡಿದ ಮೂರು ದಿನಗಳ ನಂತರದಲ್ಲಿ ನನ್ನ ಗಮನಕ್ಕೆ ಬಂದಿರುತ್ತದೆ. ನಿಡಿ 10 ದಾಖಲೆಯನ್ನು ನನ್ನ ತಂದೆಯವರೆ ನನಗೆ ತಂದು ಕೊಟ್ಟಿರುತ್ತಾರೆ. ಆ ಸಮಯದಲ್ಲಿ ನಾನು ನಿಡಿ 10 ದಾಖಲೆಯನ್ನು ಓದಿ ತಿಳಿದುಕೊಂಡಿರುತ್ತೇನೆ. ನಾನು ನಿಡಿ 10 ದಾಖಲೆಯನ್ನು ಓದಿದ ನಂತರ ಷೆಡ್ಯೂಲ್ ಎ ನಲ್ಲಿ ತಿಳಿಸಿರುವ ಐಟಮ್ ನಂ: 3 ಮತ್ತು 5 ನನ್ನ ತಂದೆಗೆ ಹೇಗೆ ಬಂದಿರುತ್ತದೆ ಎಂದು ನಾನು ನನ್ನ ತಂದೆಯಿಂದ ಕೇಳಿ ತಿಳಿದುಕೊಂಡಿರುವುದಿಲ್ಲ. ನನ್ನ

ತಂದೆಯವರು ನನ್ನ ಜೊತೆಯೆ ವಾಸಿಸುತ್ತಿದ್ದರು ಎಂದರೆ ಸರಿ. ನನ್ನ ತಂದೆ ಪೇಟೆಗೆ ಹೋಗಬೇಕಾದರೆ ನನ್ನ ಸಹಾಯದಿಂದಲೆ ಹೋಗಬೇಕಾಗಿತ್ತು ಎಂದರೆ ಸಾಕ್ಷಿಯು ನನ್ನ ತಂದೆ ಅವರಷ್ಟಕ್ಕೆ ಹೋಗುತ್ತಿದ್ದರು ಎಂದು ನುಡಿಯುತ್ತಾರೆ.

15. ನನ್ನ ತಂದೆ ಪ್ರತಿವಾರ ಭಾಗಮಂಡಲದ ಸಂತೆಗೆ ಹೋಗುತ್ತಿದ್ದರು. ಭಾಗಮಂಡಲ ಸಂತೆ ಪ್ರತಿ ಸೋಮವಾರ ಎಂದರೆ ಸರಿ. ನನ್ನ ಪ್ರಕಾರ ನನ್ನ ತಂದೆ ಭಾಗಮಂಡಲ ಸಂತೆಗೆ ಹೋಗಿ ವಾಪಸ್ಸು ಬಂದಿರುತ್ತಾರೆ. ಭಾಗಮಂಡಲದಿಂದ ನಮ್ಮ ಮನೆಗೆ ಸುಮಾರು 7 ಕಿ.ಮೀ ಆಗುತ್ತದೆ. ಸಂತೆಗೆ ಹೋಗಬೇಕಾದರೆ ಹೇಗೆ ಹೋಗಬೇಕಾಗುತ್ತದೆ ಎಂದರೆ ಸಾಕ್ಷಿಯು ಲೋಕಲ್ ಸರ್ವಿಸ್ ಜೀಪಿನಲ್ಲಿ ಹೋಗುತ್ತೇವೆ ಎಂದು ನುಡಿಯುತ್ತಾರೆ. ನಮ್ಮ ಮನೆಯ ಪಕ್ಕಕ್ಕೆ ಲೋಕಲ್ ಸರ್ವಿಸ್ ಜೀಪ್ ಬರುತ್ತದೆ. ನನ್ನ ಪ್ರಕಾರ ನನ್ನ ತಂದೆಯವರು ಭಾಗಮಂಡಲ ಪೇಟೆಗೆ ಒಬ್ಬರೆ ಹೋಗಿ, ಒಬ್ಬರೆ ಬರುತ್ತಿದ್ದರು. ಹೊಸದಾಗಿ ಸರ್ಕಾರದ ದಾಖಲೆಗಳನ್ನು ನಮ್ಮ ತಂದೆಗೆ ಯಾರು ತಂದು ಕೊಡುತ್ತಿದ್ದರು ಎಂದರೆ ಸಾಕ್ಷಿ ನಮ್ಮ ತಂದೆಯೆ ಹೋಗಿ ತೆಗೆದುಕೊಂಡು ಬರುತ್ತಿದ್ದರು ಎಂದು ನುಡಿಯುತ್ತಾರೆ. ನಿಡಿ 10 ದಾಖಲೆಯಲ್ಲಿ ವಾದಿಯವರನ್ನು ಯಾವ ಕಾರಣಕ್ಕಾಗಿ ಸೇರಿಸಿರುವುದಿಲ್ಲ ಎಂದು ನಾನು ನನ್ನ ತಂದೆಯವರನ್ನು ಕೇಳಿರುವುದಿಲ್ಲ. ನಿಡಿ 10 ದಾಖಲೆಗೆ ಸಂಬಂಧಿಸಿದಂತೆ ನನಗೆ ಹೆಚ್ಚಿನ ಮಾಹಿತಿ ಗೊತ್ತಿಲ್ಲ. ಈ ಕೇಸಿಗೆ ಸಂಬಂಧಿಸಿದಂತೆ ನಾನು ಮತ್ತು ನನ್ನ ಹೆಂಡತಿ ವಕೀಲರನ್ನು ಭೇಟಿ ಮಾಡುತ್ತಿದ್ದೆವು ಎಂದರೆ ಸಾಕ್ಷಿ ನನ್ನ ತಂದೆಯವರು ಭೇಟಿ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. 2017 ರ ಪ್ರಾರಂಭದಿಂದಲೂ ನನ್ನ ತಂದೆಯವರ ಮಾನಸಿಕ ಮತ್ತು ದೈಹಿಕವಾಗಿ ಆರೋಗ್ಯ ಸ್ಥಿತಿ ಸರಿ ಇರಲಿಲ್ಲ ಎಂದರೆ ಸುಳ್ಳು. ನನ್ನ ತಂದೆಯವರಿಗೆ ನನಗೆ ಮತ್ತು 2 ನೇ ಪ್ರತಿವಾದಿಯವರ ಹೆಸರಿನಲ್ಲಿ ಯಾವುದೆ ವೀಲುನಾಮೆ ಮಾಡುವ ಉದ್ದೇಶ ಇರಲಿಲ್ಲ ಎಂದರೆ ಸುಳ್ಳು. ನಾನು ಮತ್ತು ನನ್ನ ಹೆಂಡತಿ ವಾದಿಯವರಿಗೆ ದಾವಾ ಷೆಡ್ಯೂಲ್ ಸ್ವತ್ತುಗಳಲ್ಲಿ ಪಾಲು ಕೊಡಬೇಕಾಗುತ್ತದೆ ಎಂದು ತಪ್ಪಿಸಿಕೊಳ್ಳುವ ಸಲುವಾಗಿ ನನ್ನ ತಂದೆಯವರ ಗಮನಕ್ಕೆ ಬಾರದ ಹಾಗೆ ಮತ್ತು ನನ್ನ ತಂದೆಯವರ ದೈಹಿಕ ಮತ್ತು ಮಾನಸಿಕ ಆರೋಗ್ಯ ಸ್ಥಿತಿ ಸರಿಯಿಲ್ಲದೆ ಇರುವ ಸ್ಥಿತಿಯನ್ನು ಉಪಯೋಗಿಸಿಕೊಂಡು ನಿಡಿ

10 ದಾಖಲೆಯನ್ನು ಸೃಷ್ಟಿಸಿರುತ್ತೇವೆ ಎಂದರೆ ಸುಳ್ಳು. ನಿಡಿ 10 ವಿಷಯ 2ನೇ ಪ್ರತಿವಾದಿಗೆ ಗೊತ್ತಿದೆ. ನಿಡಿ 10 ನಾವು ಸೃಷ್ಟಿಸಿರುವಂತಹ ದಾಖಲೆಯಾಗಿರುವುದರಿಂದ ಸದರಿ ದಾಖಲೆಯ ಆಧಾರದ ಮೇರೆಗೆ ನಮಗೆ ಯಾವುದೆ ಹಕ್ಕು ಬರುವುದಿಲ್ಲ ಎಂದರೆ ಸುಳ್ಳು. ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ ವಾದಿಯವರಿಗೆ ಇರುವ ಪಾಲನ್ನು ನಾವು ಕೊಡಬೇಕಾಗುತ್ತದೆ ಎಂದರೆ ಸುಳ್ಳು.

**ಮರುವಿಚಾರಣೆ: ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-
(ಎನ್ ಬಿ ಜಯಲಕ್ಷ್ಮಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.